ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸೋದ್ಯಮ ಕೇಂದ್ರದ ಕುರಿತು

2338 - ಶ್ರೀ ಎ. ರುಕ್ಮಯ ಪೂಜಾರಿ (ವಿಟ್ಲ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಲು ಎಲ್ಲಾ ತರದ ಅನುಕೂಲತೆಗಳು ಇರುವುದು ನಿಜವಲ್ಲವೇ?*

ಆ) *ಹಾಗಾದರೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?*

ಇ) *ಇದರಿಂದ ಆದಾಯ ಉದ್ಯೋಗ ಅವಕಾಶಗಳು ಹೆಚ್ಚಾಗುವ ಬಗ್ಗೆ ಸರ್ಕಾರವು ಗಮನಿಸುವುದೇ?*

ಶ್ರೀ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಹೌದು.

ಆ) ಈಗಾಗಲೇ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1) ದಿನಾಂಕ : 1-6-97 ರಿಂದ ಜಾರಿಗೆ ತಂದಿರುವ ಪರಿಷ್ಕೃತ ಪ್ರವಾಸೋದ್ಯಮ ಕಾರ್ಯನೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ಮೂಡಬಿದ್ರಿ, ವಾರಂಗ, ಉಡುಪಿ, ಮಲ್ಪೆ, ಸೆಂಟ್ ಮೇರೀಸ್ ದ್ವೀಪ, ಕಾಪು, ಮಣಿಪಾಲ್, ಕುಂದಾಪುರ, ಮರವಂತೆ, ಕೊಲ್ಲೂರು, ಬೈಂದೂರು, ಹರಿಸಿನಗುಂಡಿ ಫಾಲ್ಸ್ ಸುರತ್ಕಲ್, ಪಣಂಬೂರ್, ಉಳ್ಳಾಲ, ಸೋಮೇಶ್ವರ, ಕಟೀಲ್, ಪಿಲಿಕುಲ ನಿಸರ್ಗಧಾಮ, ದರ್ಮಸ್ಥಳ, ವೇಣೂರು, ಜಮಾಲಾಬಾದ್, ಸಿಸಿಲ, ಸುಬ್ರಮಣ್ಯ, ಬೇಂದ್ರೆ ತೀರ್ಥ, ಶಿರಾಡಿ, ಉಪ್ಪಿನಂಗಡಿ, ಅಮ್ಮತ್ತೂರ್, ಪ್ರವಾಸಿ ಕೇಂದ್ರಗಳನ್ನು "ಸಿ" ಗುಂಪಿಗೆ ಸೇರಿಸಿದೆ. ಈ ಸ್ಥಳಗಳಲ್ಲಿ ಖಾಸಗಿಯವರು ನಿರ್ಮಿಸುವ ಪ್ರವಾಸೋದ್ಯಮ ಯೋಜನೆಗಳಿಗೆ ಶೇಕಡ 25ರಷ್ಟು ಗರಿಷ್ಠ 25.00 ಲಕ್ಷ ರೂ.ಗಳಷ್ಟು ಬಂಡವಾಳ ಹೂಡಿಕೆ ಮೇಲೆ ಸಬ್ಸಿಡಿಯನ್ನು ನೀಡಲಾಗುವುದು. ಮಂಗಳೂರು ನಗರಪಾಲಿಕೆ ವ್ಯಾಪ್ತಿ ಹೊರತುಪಡಿಸಿ ಹೈಟೈಡ್ ಲೈನ್‌ನಿಂದ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಬರುವ ಕಡಲು ತೀರ ಪ್ರದೇಶಗಳನ್ನು 'ಇ' ವರ್ಗದಲ್ಲಿ ಗುರುತಿಸಿದೆ. ಈ ಸ್ಥಳದಲ್ಲಿ ಖಾಸಗಿಯವರು ನಿರ್ಮಿಸುವ ಪ್ರವಾಸೋದ್ಯಮ ಯೋಜನೆಗಳಿಗೆ ಶೇಕಡ 30 ರಷ್ಟು, ಗರಿಷ್ಠ ರೂ. 30.00 ಲಕ್ಷ ಗಳಷ್ಟು ಬಂಡವಾಳ ಸಬ್ಸಿಡಿಯನ್ನು ನೀಡಲಾಗುವುದು. ಅಲ್ಲದೆ, ಹಲವಾರು ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು.

(2) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ಈ ಕೆಳಕಂಡ ಅಭಿವೃದ್ಧಿ ಕಾರ್ಯಗಳನ್ನು ಜಿಲ್ಲಾ ಆಡಳಿತ ಮತ್ತು ಜಿಲ್ಲಾ ಪರಿಷತ್ ಸಹಯೋಗದೊಡನೆ ಕೈಗೊಳ್ಳಲಾಗಿದೆ.

		ಲಕ್ಷ ರೂ.ಗಳಲ್ಲಿ
1.	ಉಳ್ಳಾಲ ಕಡಲು ತೀರ ಅಭಿವೃದ್ಧಿ	4.00
2.	ಉಳ್ಳಾಲ ಕಡಲು ತೀರ ಕೂಡುರಸ್ತೆ	4.00
3.	ಉಳ್ಳಾಲ ಸಯ್ಯದ್ ಮದನಿದರ್ಗ ಕೂಡುರಸ್ತೆ	8.00
4.	ಮರವಂತೆ ಕಡಲು ತೀರ ಅಭಿವೃದ್ಧಿ	5.00
5.	ಸುರತ್ಕಲ್ ಕಡಲುತೀರ ಅಭಿವೃದ್ಧಿ	5.00
6.	ಸುರತ್ಕಲ್ ಕಡಲುತೀರದಲ್ಲಿ ರಿಟೈನಿಂಗ್ ಗೋಡೆ ನಿರ್ಮಿಸಲು	4.00
7.	ಸುರತ್ಕಲ್ ಕಡಲುತೀರ ರಸ್ತೆ ಅಭಿವೃದ್ಧಿ	5.00
8.	ಮಲ್ಪೆ ಕಡಲುತೀರ ಅಭಿವೃದ್ಧಿ	8.00
9.	ಮಲ್ಪೆ ಕಡಲುತೀರ ಕೂಡುರಸ್ತೆ	5.00
10.	ಸಿರೂರು ಕಡಲುತೀರ ಕೂಡುರಸ್ತೆ	5.00
11.	ಪಲಿಕುಲ ನಿಸರ್ಗಧಾಮಕ್ಕೆ ಟಾಯ್ ಟ್ರೈನ್ ಸೌಲಭ್ಯ	5.00
12.	ವೇಣೂರು ಬಾಹುಬಲಿ ಕೂಡುರಸ್ತೆ	2.50
13.	ಮಂಗಳೂರಿನಲ್ಲಿ ಪ್ರವಾಸಿ ಕಛೇರಿ ನಿರ್ಮಾಣ	20.00
14.	ಉಡುಪಿ, ಧರ್ಮಸ್ಥಳ, ಉಳ್ಳಾಲದಲ್ಲಿ ಶೌಚಾಲಯ ನಿರ್ಮಾಣ	17.40
15.	ಉಡುಪಿಯಲ್ಲಿ ಯಾತ್ರಿನಿವಾಸ ನಿರ್ಮಾಣ	25.00
16.	ಮರವಂತೆಯಲ್ಲಿ ಯಾತ್ರಿನಿವಾಸ ನಿರ್ಮಾಣ	25.00
17.	ವಾಮಂಜೂರು-ಪಿಲಿಕುಲ ಕೂಡುರಸ್ತೆ	5.00
18.	ಮುಡುಶೆಡ್-ಪಿಲಿಕುಲ ಕೂಡುರಸ್ತೆ	5.00

(3) ಮಂಗಳೂರಿನ ಹತ್ತಿರವಿರುವ ಪಿಲಿಕುಲ ನಿಸರ್ಗಧಾಮ ಸಮಗ್ರ ಅಭಿವೃದ್ಧಿಗಾಗಿ ಯೋಜನೆ ತಯಾರಿಸಲಾಗುತ್ತಿದ್ದು, ಖಾಸಗಿ ಬಂಡವಾಳ ಹೂಡಿಕೆಗಾಗಿ ಮಂಡಿಸಲಾಗುವುದು.

ಇ) ಹೌದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಲಾಖೆಯು ಖಾಸಗಿಯವರು ನಿರ್ಮಿಸಲಿರುವ 41 ಪ್ರವಾಸೋದ್ಯಮ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಇದರಿಂದಾಗಿ ಸುಮಾರು 856 ಜನರಿಗೆ ಉದ್ಯೋಗಾವಕಾಶವು ದೊರೆಯುತ್ತದೆಯೆಂದು ಅಂದಾಜು ಮಾಡಲಾಗಿದೆ.